ಕನ್ನಡ ಪೋಸ್ಟ್
KANNADA POST
ಇದು ಸುದ್ದಿ ವಿಲಾಸ
ಕನ್ನಡ ದಿನಪತ್ರಿಕೆ
ಸಂಪಾದಕ : ಮಂಜು ಬನವಾಸೆ
ಹಾಸನ  E-mail : kannadapostnews@gmail.com  / ಕನ್ನಡ post  Price: ₹1
Vol.No.01 | Issue. 313 | Pages. 2 | Date: 08-11-2025, SATURDAY  RNI NO: KARKAN/2024/89601  Kannada Daily
ಸಂಪುಟ : 01 - ಸಂಚಿಕೆ : 313 - ಪುಟಗಳು : 2  08-11-2025 ಶನಿವಾರ  Ph: 8762954248  ದರ : ₹1

# ಕೆರೆಗೆ ನೀರು ತಂದು ಭಗೀರಥರಾದ ರೈತರು

## ಎತ್ತಿನಹೊಳೆ ಯೋಜನೆ ಸದುಪಯೋಗ | ಅಂತರ್ಜಲ ಮಟ್ಟ ವೃದ್ಧಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಬಯಲು ಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಎತ್ತಿನಹೊಳೆ ಯೋಜನೆ ನೀರು ಅರಸೀಕೆರೆ ಹಾಗೂ ಬೇಲೂರು ತಾಲ್ಲೂಕಿನ ಕೆರೆಗಳಿಗೆ ವರದಾನವಾಗಿದ್ದು ರೈತರು ಪೈಪ್‌ಲೈನ್ ಅಳವಡಿಸಿ ಕೆರೆಗಳ ಭರ್ತಿ ಮಾಡಿಕೊಳ್ಳುವ ಮೂಲಕ ಭಗೀರಥರಾಗಿದ್ದಾರೆ.

ಹಳೇಬೀಡು, ಜಾವಗಲ್ ಹೋಬಳಿಯ ನೂರಾರು ಕೆರೆಗಳು ಎತ್ತಿನಹೊಳೆ ಯೋಜನೆಯಿಂದ ಸಂಪದ್ಭರಿತವಾಗಿವೆ. ಬಯಲು ಸೀಮೆ ಪ್ರದೇಶಕ್ಕೆ ನೀರು ಒದಗಿಸುವ ಮಹತ್ವದ ಯೋಜನೆಯೇ ಎತ್ತಿನಹೊಳೆಯಾದರೂ ದಶಕಗಳಿಂದ ಕೆರೆ ತುಂಬಿಸುವ ಕೆಲಸ ಆಗಿಲ್ಲ. ಅದನ್ನು ಅರಿತ ರೈತರೇ ಮುಂದಾಳತ್ವ ವಹಿಸಿ ಪೈಪ್‌ಲೈನ್ ಮೂಲಕ ನೀರು ಹರಿಸಿದ್ದಾರೆ.

ನಿಡಘಟ್ಟ, ಸಿಂದಿಗೆರೆ, ಎಸ್.ಬಿದರೆ ಹೀಗೆ ಸುತ್ತಲಿನ ಅನೇಕ ಕೆರೆಗಳಿಗೆ ಎತ್ತಿನಹೊಳೆ ನೀರು ತಲುಪಿದೆ. ಅದರಿಂದ ಅಂತರ್ಜಲ ಮಟ್ಟ ವೃದ್ಧಿಯಾಗಿರುವುದು ಮಾತ್ರವಲ್ಲದೆ ಉತ್ತಮ ಬೆಳೆಗಳನ್ನು ರೈತರು ಪಡೆಯುವಂತಾಗಿದೆ.

### ರೈತರೇ ಚಂದಾ ಎತ್ತಿದ ಹಣದಿಂದ ಪೈಪ್‌ಲೈನ್

ಹಳೇಬೀಡು, ಜಾವಗಲ್ ಹೋಬಳಿಯಲ್ಲಿ ನೀರಿಗೆ ಹಾಹಾಕಾರ ಇದೆ. ಮಳೆಯಾಶ್ರಿತ ಬೆಳೆಯನ್ನೇ ಭಾಗದ ರೈತರು ಕೈಗೊಂಡಿದ್ದಾರೆ. 1500 ಅಡಿ ಆಳ ಕೊರೆದರೂ ನೀರು ದೊರೆಯದ



ಪರಿಸ್ಥಿತಿ ಅಲ್ಲಿದೆ. ಅರಸೀಕೆರೆ, ಕಡೂರು ಭಾಗದಲ್ಲಿ ನೀರಿಗೆ ಹಾಹಾಕಾರ ಇದೆ. ಹೀಗಾಗಿ ಅಲ್ಲಿನ ರೈತರು ಉತ್ತಮ ಇಳುವರಿ ಪಡೆಯುವುದು ವಿರಳ ಎನ್ನುವಂತಾಗಿದೆ. ಆದರೆ ಎತ್ತಿನಹೊಳೆ ಯೋಜನೆ ಅವರಿಗೆ ಅನುಕೂಲ ಕಲ್ಪಿಸಿದೆ ಎನ್ನಬಹುದು. ಸಕಲೇಶಪುರದ ಪಶ್ಚಿಮ ಘಟ್ಟದ ಆರಂಭವಾಗುವ ಎತ್ತಿನಹೊಳೆ ಯೋಜನೆ ನೀರು ಪೈಪ್‌ಲೈನ್ ಮೂಲಕ ಹಳೇಬೀಡು ಹೋಬಳಿ ಬೆಳವಾಡಿ ಕೆರೆ ತಲುಪುತ್ತಿದೆ. ಅಲ್ಲಿಂದ ಮಾಚೇನಹಳ್ಳಿ ಕೆರೆ ಸೇರುತ್ತದೆ. ನಂತರ ಗುರುತ್ವಾಕರ್ಷಣೆ ಮೂಲಕ ಇಳಿಜಾರಿನಲ್ಲಿ ಹಾದು ನೀರು ವೇದಾ ನದಿಗೆ ಸೇರುವ ನೀರನ್ನು ಕೆರೆಗಳ ಹರಿಸಿ ಕೃಷಿಗೆ ಬಳಸಿಕೊಳ್ಳಲಾಗುತ್ತಿದೆ. ಮೊದಲು ನಿಡಘಟ್ಟ

> “ನಮ್ಮ ಭಾಗದಲ್ಲಿ 1500 ಅಡಿ ಆಳ ಕೊರೆದರೂ ಕೊಳವೆ ಬಾವಿಗಳು ವಿಫಲವಾಗುತ್ತಿದ್ದವು. ಇತ್ತೀಚೆಗೆ ಅಂತರ್ಜಲ ಮಟ್ಟ ವೃದ್ಧಿಯಾಗುತ್ತಿದ್ದು ಅದಕ್ಕೆ ಎತ್ತಿನಹೊಳೆ ಯೋಜನೆ ಕಾರಣ ಎನ್ನಬಹುದು. ಸುಮಾರು 7.5 ಇಂಚಿನಷ್ಟು ನೀರು ಕೆರೆಗೆ ಹರಿದುಬರುತ್ತಿದೆ.
>
> – ವಿನಾಯಕ, ಸಿಂದಿಗೆರೆ ರೈತ



ಗ್ರಾಮದ ರೈತರು ಈ ಕಾಮಗಾರಿಗೆ ಮುನ್ನುಡಿ ಬರೆದರು. ನಂತರ ಅದು ಸುತ್ತಲಿನ ಹಳ್ಳಿಗಳಿಗೂ ವಿಸ್ತರಣೆಯಾಗಿದೆ. ಸುಮಾರು ಒಂದೂವರೆ ಕಿ.ಮೀ. ದೂರದ ವರೆಗೆ ಪೈಪ್‌ಲೈನ್ ಅಳವಡಿಸಲು ರೈತರೇ ಹಣ ಸಂಗ್ರಹಿಸಿದ್ದಾರೆ. ಕೆರೆಗಳು ಭರ್ತಿಯಾದರೆ ಸಾಕೆಂಬ ಉದ್ದೇಶದಿಂದ ಕೃಷಿಕರು, ಜಮೀನು ಇಲ್ಲದೆ ಇರುವವರು, ಉದ್ಯೋಗ ಅರಿಸಿ ಬೇರೆ ಬೇರೆ ನಗರಗಳಲ್ಲಿ ವಾಸಿಸುವವರು ಸಹ ಶಕ್ತ್ಯಾನುಸಾರ ಆರ್ಥಿಕ ಸಹಾಯ ಮಾಡುವ ಮೂಲಕ ಗ್ರಾಮಕ್ಕೆ ನೀರು ತಂದಿದ್ದಾರೆ.

### ಬೆಳೆಗೆ ವರವಾದ ನೀರು

ಪೈಪ್‌ಲೈನ್ ಮೂಲಕ ಕೆರೆಗಳನ್ನು ತುಂಬಿಸಿದ ಎತ್ತಿನಹೊಳೆ ನೀರು ಬೆಳೆಗೆ ಅನುಕೂಲ ಕಲ್ಪಿಸಿದೆ. ಏಕ ಬೆಳೆ ಅವಲಂಬಿಸಿದ್ದ ಬಯಲು ಸೀಮೆ ರೈತರೀಗ ಬಹು ಬೆಳೆಯತ್ತ ಗಮನ ಹರಿಸಿದ್ದಾರೆ. ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗೂ ಪರದಾಡುವ ಚಿಂತಾಜನಕ ಸ್ಥಿತಿ ಕೆಲವು ಗ್ರಾಮಗಳಲ್ಲಿದೆ. ಈಗ ಆ ಗ್ರಾಮಗಳಲ್ಲಿ ಬವಣೆ ದೂರಾಗುವ ಭರವಸೆ ಮೂಡಿದೆ.

### ಸರ್ಕಾರದಿಂದ ಸಿಗಲಿ ಪ್ರೋತ್ಸಾಹ

ನೀರಿನ ತೀವ್ರ ಅಭಾವದಿಂದ ಬೆಳೆಗಳು ಒಣಗುತ್ತಿದ್ದಾಗ, ರೈತರು ಸರ್ಕಾರದ ನಿರೀಕ್ಷೆಯಲ್ಲಿ ಕಾಲಹರಣ ಮಾಡದೇ ಸಹಕಾರದ ಮನೋಭಾವದಿಂದ ನೀರನ್ನು ಹತ್ತಿರದ ಪೈಪ್ ಸಂಪರ್ಕದಿಂದ ತಮ್ಮ ಹೊಲಗಳಿಗೆ ತಲುಪಿಸುತ್ತಿದ್ದಾರೆ. ಮಾಜಿ ಸಂಸದ ಸಿದ್ದು ನ್ಯಾಮನಗೌಡ ಅವರು ಕೃಷ್ಣಾ ನದಿಗೆ ಬ್ಯಾರೇಜ್ ನಿರ್ಮಿಸಿ ಸಾವಿರಾರು ಎಕರೆ ಭೂಮಿಗೆ ನೀರೊದಗಿಸಿದ್ದರು. ಅದೇ ಮಾದರಿಯಲ್ಲಿ ಜಿಲ್ಲೆಯ ರೈತರು ಮುಂದಡಿ ಇಟ್ಟಿದ್ದಾರೆ.

# ಸಾಹಿತಿಗಳ ಅಭಿನಂದನಾ ಕಾರ್ಯಕ್ರಮ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ದಿನ ಪತ್ರಿಕೆ, ಕತೆ ಹಾಗೂ ಕಾದಂಬರಿಗಳನ್ನು ಓದುವುದರಿಂದ ಆಸಕ್ತಿಯೊಂದಿಗೆ ಕೂತುಹಲ ಹೆಚ್ಚಿಸುತ್ತದೆ ಎಂದು ಸಾಹಿತಿ ಮೇಟಿಕೆರೆ ಹಿರಿಯಣ್ಣ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅನಿಕೇತನ ಸಾಹಿತ್ಯ ವೇದಿಕೆಯ ಸಹಯೋಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಮತ್ತು ಎಸ್. ಎಲ್. ಭೈರಪ್ಪನವರಿಗೆ ನುಡಿ ನಮನ ಹಾಗೂ ಸಾಹಿತಿಗಳ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಓದು ನಮ್ಮ ಜ್ಞಾನ ಮತ್ತು ಸುಸಂಸ್ಕೃತವನ್ನು ಹೆಚ್ಚಿಸುತ್ತದೆ. ಪತ್ರಿಕೆಗಳು ಹಿಂದಿನ ಕಾಲ (ಭೂತಕಾಲ) ಮತ್ತು ಮುಂದಿನ ಕಾಲದ (ಭವಿಷ್ಯತ್ ಕಾಲ) ಸೇತುವೆ ಇದ್ದಂತೆ ಎಂದರು. ಭೈರಪ್ಪನವರ ಪರ್ವವನ್ನು ಪ್ರತಿಯೊಬ್ಬರು ಓದಬೇಕು ಎಂದರು.

ಸಾಹಿತಿ ಹೊಸೂರು ತಮ್ಮಣ್ಣಗೌಡ ಮಾತನಾಡಿ, ಸಮಾಜದ ಹಿತವನ್ನು ಬಯಸುವುದು ಕನ್ನಡ ಸಾಹಿತ್ಯ, ಮಾತೃ ಭಾಷೆಯನ್ನು ಕಡೆಗಣಿಸಿದರೆ ಆ ರಾಜ್ಯ, ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ. ಮಾತೃ ಭಾಷೆಯಲ್ಲಿ ಚೆನ್ನಾಗಿ ಮಾತನಾಡುವುದನ್ನು ಕಲಿತರೆ, ಇತರೆ ಭಾಷೆಗಳನ್ನು ಕಲಿಯಯಬಹುದು. ಭೈರಪ್ಪನವರ ಕಾದಂಬರಿಗಳಲ್ಲಿ




ಗ್ರಾಮೀಣ ಬದುಕಿನ ಸತ್ಯಗಳು ಇವೆ ಎಂದು ತಿಳಿಸಿದರು

ಸಾಹಿತಿ ನಿಂಬೇಹಳ್ಳಿ ಚಂದ್ರೇಗೌಡ ಮಾತನಾಡಿ, ಗುರುಗಳು ಹೇಳಿದ್ದನ್ನು ಕೇಳಿಸಿಕೊಳ್ಳವ ಅಭ್ಯಾಸ ಮಾಡಿಕೊಳ್ಳಬೇಕು, ಸರಿಯಾಗಿ ಕೇಳಿಸಿಕೊಂಡವನೂ ಉತ್ತಮ ಪ್ರಜೆಯಾಗುತ್ತಾನೆ. ನಮ್ಮ ಮನೆತನ, ನಾಡು, ನುಡಿ, ಸಂಸ್ಕೃತಿಯನ್ನು ಗೌರವಿಸಬೇಕು ಎಂದರು.

ಪ್ರಾಂಶುಪಾಲ ಬಿ.ಹೆಚ್. ಲಕ್ಷ್ಮಣಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಾಹಿತ್ಯ ಪರಿಷತ್ತಿನ ಹೋಬಳಿ ಘಟಕದ ಅಧ್ಯಕ್ಷ ಎಚ್.ಎ. ಪ್ರಮೋದ್, ಕಾಲೇಜಿನ ಕನ್ನಡ ಉಪನ್ಯಾಸಕಿ ಎನ್.ಆರ್. ಆಶಾ ಮಾತನಾಡಿದರು. ಎಂಜಿನಿಯರ್ ಜೆ.ಇ. ನರೇಂದ್ರ ಭಾಗವಂತಿಗೆ ಹಾಡುಗಳನ್ನು ಹಾಡಿದರು. ಮಾದಲಗೆರೆ ನಂಜೇಗೌಡ ಪದವಿ ಕಾಲೇಜಿಗೆ ಪುಸ್ತಕಗಳನ್ನು ನೀಡಿದರು.

ಹಿರೀಸಾವೆ ಹೋಬಳಿ ಕನ್ನಡ ಸಾಹಿತ್ಯ ಪರಿಷತ್ ಹೋಬಳಿ ಘಟಕವು ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ, ಭೈರಪ್ಪನವರ ನುಡಿನಮನ ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಮೇಟಿಕೆರೆ ಹಿರಿಯಣ್ಣ, ಹೊಸೂರು ತಮ್ಮಣ್ಣಗೌಡ, ನಿಂಬೆಹಳ್ಳಿ ಚಂದ್ರೇಗೌಡ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯ ಕಾರ್ಯಕ್ರಮದ ಮೊದಲಿಗೆ ಅತಿಥಿಗಳು ಭುವನೇಶ್ವರಿ ದೇವಿಗೆ ಪೂಜೆ ಮತ್ತು ಎಸ್.ಎಲ್. ಭೈರಪ್ಪನವರಿಗೆ ಪುಷ್ಪ ನಮನ ಸಲ್ಲಿಸಿದರು. ಸಾಹಿತ್ಯ ಪರಿಷತ್ತಿನ ಹೋಬಳಿ ಘಟಕದ ಭಾರತಿ, ಗೋವಿಂದರಾಜ್, ಮಾರುತಿ ಮಂಜುನಾಥ್, ತೋಟಿ ಮಂಜು, ಕುಮಾರಣ್ಣ ಮತ್ತು ಕಾಲೇಜಿನ ಸಿಬ್ಬಂದಿ, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಇದ್ದರು.

# ಎ.ವಿ.ಕೆ. ಕಾಲೇಜಿನಲ್ಲಿ ಶೈಕ್ಷಣಿಕ ಕಾರ್ಯಾಗಾರ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಗುಣವಂಟ್ಟದ ಶಿಕ್ಷಣದೊಂದಿಗೆ ನೂರಕ್ಕೆ ನೂರು ಫಲಿತಾಂಶದ ನಿರೀಕ್ಷೆಯನ್ನು ಸರ್ಕಾರ ಹೊಂದಿದ್ದು ಪಿಯುಸಿಯಲ್ಲಿ ಪಾಸಾಗಲು ಕನಿಷ್ಟ 100ಕ್ಕೆ 33 ಅಂಕ ಪಡೆಯಲೇಬೇಕು. ಆಂತರಿಕ ಅಂಕಗಳು ಸೇರಿ 33 ಅಂಕಗಳು ಬರಬೇಕಾಗಿರುವುದರಿಂದ ಶೇ. 100 ರಷ್ಟು ಫಲಿತಾಂಶ ಬರುತ್ತದೆ ಎಂದು ಪದವಿ ಪೂರ್ವ ಕಾಲೇಜು ಉಪನಿರ್ದೇಶಕ ಕೆ.ಪಿ. ಗಂಗಾಧರ್ ಹೇಳಿದರು.

ರಾಜ್ಯಶಾಸ್ತ್ರ ಪ್ರಾಂಶುಪಾಲರು ಹಾಗು ಉಪನ್ಯಾಸಕರ ವೇದಿಕೆಯಿಂದ ಎ.ವಿ.ಕೆ. ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಶೈಕ್ಷಣಿಕ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಮಕ್ಕಳು ಕನಿಷ್ಟ ಅಂಕಗಳಿಗೆ ಸೀಮಿತಗೊಳ್ಳದಂತೆ ಅತಿ ಹೆಚ್ಚು ಅಂಕಗಳನ್ನು ಗಳಿಸುವ ನಿಟ್ಟಿನಲ್ಲಿ ಮಕ್ಕಳನ್ನು ಸಜ್ಜುಗೊಳಿಸುವ ಜವಾಬ್ದಾರಿ ಉಪನ್ಯಾಸಕರ ಮೇಲಿದೆ ಎಂದು ಹೇಳಿದರು.

ಒಂದೊಮ್ಮೆ ಬಹು ಬೇಡಿಕೆಯಲ್ಲಿದ್ದ ರಾಜ್ಯಶಾಸ್ತ್ರ ವಿಭಾಗ ಇಂದಿನ ತಂತ್ರಜ್ಞಾನ ಶಿಕ್ಷಣದ ಆಕರ್ಷಣೆಯಿಂದ ಯುವ ಜನತೆಯಲ್ಲಿ ಆಕರ್ಷಣೆ ಕಳೆದುಕೊಳ್ಳುತ್ತಿದೆ. ಜೀವನದ ಪ್ರತಿಯೊಂದು ರಂಗದಲ್ಲಿ ರಾಜ್ಯಶಾಸ್ತ್ರ ಅಡಕವಾಗಿದೆ. ಅದನ್ನು ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು.

ಪ್ರಾಥಮಿಕ ಶಿಕ್ಷಣ ಮಕ್ಕಳಿಗೆ ಹೇರಿಕೆಯಾಗಿದೆ. ಅದರಿಂದ ಮಕ್ಕಳ ಬೌದ್ಧಿಕ ಬೆಳವಣಿಗೆಯ ಮೇಲೆ ಮಾರಕ ಪರಿಣಾಮ ಬೀರುತ್ತದೆ. ಶಿಕ್ಷಣ ಇಂದು ತೋರಿಕೆಯಾಗಿದೆ. ಗುಣಮಟ್ಟದ ಶಿಕ್ಷಣ ನೀಡುವಲ್ಲಿ ವಿಫಲರಾಗುತ್ತಿರುವ ಬಗ್ಗೆ ಇಡೀ ಉಪನ್ಯಾಸಕ ಸಮುದಾಯ ಆಲೋಚಿಸುವ ಅನಿವಾರ್ಯತೆ ಇದೆ ಎಂದು ಕಿವಿಮಾತು ಹೇಳಿದರು.

ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ಹಾಸನದಲ್ಲಿ ಎಲ್ಲ ರೀತಿಯ ಶಿಕ್ಷಣ ಪಡೆಯುವ ಸೌಲಭ್ಯ ಇದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಬೇರೆ ಜಿಲ್ಲೆಗಳಿಗೆ ಹೋಗದೆ ಇಲ್ಲೇ ಉನ್ನತ ಶಿಕ್ಷಣ ಪಡೆಯಬೇಕು ಎಂದು ತಿಳಿಸಿದರು.

ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಸಂಘದ ಅಧ್ಯಕ್ಷ ಸುರೇಶ್ ಮಾತನಾಡಿ, ಉಪನ್ಯಾಸಕರಾಗಿ ನೇಮಕರಾಗಿ ಶಿಕ್ಷಕರಾಗಿ ನಿವೃತ್ತಿಯಾಗುತ್ತಿರುದಕ್ಕೆ ಬೇಸರ ವ್ಯಕ್ತಪಡಿಸಿದರು. ಪ್ರಾಂಶುಪಾಲ ಯತೀಶ್ವರ್, ಕೆ.ಎಂ.ಲಕ್ಷ್ಮೀಕಾಂತ, ಶ್ರೀನಿವಾಸ್, ಬಿ.ಎಂ.ಅಕ್ಷತಾ ಇತರರಿದ್ದರು.

# 1.24 ಕೋಟಿ ರೂ. ವೆಚ್ಚದ ಯೋಜನೆಗೆ ಚಾಲನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ : ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಜಲ ಜೀವನ್ ಮಿಷನ್ ಯೋಜನೆಯಡಿ ತಾಲ್ಲೂಕಿನ ಮೂರು ಗ್ರಾಮಗಳಿಗೆ ಕುಡಿವ ನೀರು ಒದಗಿಸವ 1.24 ಕೋಟಿ ರೂ. ವೆಚ್ಚದ ಕಾಮಗಾರಿಗೆ ಶುಕ್ರವಾರ ಶಾಸಕ ಸಿಮೆಂಟ್ ಮಂಜು ಚಾಲನೆ ನೀಡಿದರು.

ತಾಲ್ಲೂಕಿನ ಹೆತ್ತೂರು ಹೋಬಳಿ ವ್ಯಾಪ್ತಿಯ ಹಳ್ಳಿಬೈಲು ಗ್ರಾಮದಲ್ಲಿ 45 ಲಕ್ಷ ವೆಚ್ಚದಲ್ಲಿ 30 ಮನೆ.ವಣಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಬೈಲು ಗ್ರಾಮದಲ್ಲಿ ?35 ಲಕ್ಷ ವೆಚ್ಚದಲ್ಲಿ 20 ಮನೆಗಳಿಗೆ ಪೈಪ್ ಲೈನ್ ಹಾಗೂ ನೀರಿನ ಟ್ಯಾಂಕ್ ನಿರ್ಮಾಣ ಮತ್ತು ತಂಬೈಲು ಗ್ರಾಮದಲ್ಲಿ ?44 ಲಕ್ಷ ವೆಚ್ಚದಲ್ಲಿ 27 ಮನೆಗಳಿಗೆ ಶುದ್ಧ ನೀರು ಪೂರೈಸಲು ಕ್ರಮ ವಹಿಸಲಾಗಿದೆ. ನಂತರ ಮಾಧ್ಯಮದೊಂದಿಗೆ ಮಾತನಾಡಿದ ಶಾಸಕರು,ಜಲ ಜೀವನ್ ಮಿಷನ್ ಯೋಜನೆ ಮೂಲಕ ಗ್ರಾಮೀಣ ಪ್ರದೇಶದ ಪ್ರತಿ ಮನೆ ಮನೆಗೆ ನಲ್ಲಿ ಸಂಪರ್ಕದ ಮೂಲಕ ಶುದ್ಧ ಕುಡಿಯುವ ನೀರು ನೀಡಲಿದ್ದು ಇದರ ಸದುಪಯೋಗ ಪಡಿಸಿಕೊಳ್ಳಬೇಕು. ಗ್ರಾಮೀಣ ಭಾಗದಲ್ಲಿ ಶುದ್ಧ ಕುಡಿಯುವ ನೀರಿನ ಸಮಸ್ಯೆಯಿಂದ ಕಾಯಿಲೆಗಳಿಗೆ, ದೈಹಿಕ ಸಮಸ್ಯೆಗಳಿಗೆ ತುತ್ತಾಗುತ್ತಿದ್ದರು. ಸರ್ಕಾರ ಸಾಕಷ್ಟು ಕಡೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಮಾಡಿದರು ಸಹ ಇನ್ನು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದನ್ನು ನೋಡಿತ್ತಿದ್ದೇವೆ. ಅದಕ್ಕಾಗಿ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಗ್ರಾಮೀಣ ಭಾಗದ ಪ್ರತಿ ಮನೆಗೆ ನಲ್ಲಿ ಮೂಲಕ ನೀರು ಸರಬರಾಜು ಮಾಡುವ ಮೂಲಕ ಪ್ರತಿಯೊಬ್ಬರ ಆರೋಗ್ಯ ಕಾಪಾಡುವ ಕೆಲಸ ಮಾಡುವುದು ನಮ್ಮ ಮೊದಲ ಆದ್ಯತೆಯಾಗಿದೆ ಎಂದರು. ಗುತ್ತಿಗೆದಾರರು ಕಾಮಗಾರಿ ನಡೆಸುವ ವೇಳೆ ಅನವಶ್ಯಕವಾಗಿ ರಸ್ತೆಯನ್ನು ಬಾರದು. ತ್ವರಿತವಾಗಿ ಗುಣಮಟ್ಟದಿಂದ ಕೂಡಿದ ಕಾಮಗಾರಿ ನಡೆಸುವಂತೆ ಸೂಚನೆ ನೀಡಿದರು

ಈ ಸಂಧರ್ಭದಲ್ಲಿ ಹೆತ್ತೂರು ಗ್ರಾಮ ಪಂಚಾಯತಿ ಅಧ್ಯಕ್ಷ ನಾಗರಾಜ್, ವಣಗೂರು ಗ್ರಾಮ ಪಂಚಾಯತಿ ಪುಷ್ಪ, ಉಪಾಧ್ಯಕ್ಷರು ನಾರಾಯಣ್, ಸದಸ್ಯರಾದ ಡಿಲಾಕ್ಷ, ಮಾಲಿನಿ, ಸುಬ್ರಮಣ್ಯ, ರಂಜಿತ, ಗ್ರಾಮದ ಮುಖಂಡರಾದ ಅಪ್ಪಸ್ವಾಮಿ ಗೌಡ, ಬಾಲಕೃಷ್ಣ, ಉಮೇಶ್ ಗ್ರಾಪಂ ಅಭಿವೃದ್ಧಿ ಅಧಿಕಾರಿ ಸಂಜಯ್, ಮುಖಂಡರಾದ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಸಿ.ಟಿ.ರವಿ ವಿರುದ್ಧ ಎಫ್‌ಐಆರ್ ದಾಖಲಿಸಲು ಒತ್ತಾಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ವಿಧಾನ ಪರಿಷತ್ ಸದಸ್ಯ ಹಾಗೂ ಮಾಜಿ ಸಚಿವ ಸಿ.ಟಿ.ರವಿ ಅವರ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಿಸುವಂತೆ ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗ ಹಾಗೂ ಸವಿತಾ ಸಮಾಜದ ನಾಯಕರಿಂದ ನಗರ ಪೊಲೀಸ್ ಠಾಣೆಗೆ ದೂರು ಸಲ್ಲಿಕೆಯಾಗಿದೆ.

ಚಿಕ್ಕಮಗಳೂರು ರೂರಲ್ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಮೊಬೈಲ್ ಮೂಲಕ ನಡೆಸಿದ ಮಾತುಕತೆಯಲ್ಲಿ ಸಿ.ಟಿ.ರವಿ ಅವರು ಸವಿತಾ ಸಮಾಜವನ್ನು ನಿಂದಿಸುವ ಪದವನ್ನು ಬಳಸಿರುವ ದೃಶ್ಯ ಟಿವಿ ಮಾಧ್ಯಮಗಳಲ್ಲಿ ಪ್ರಸಾರವಾಗಿದ್ದು, ಇದು ಸವಿತಾ ಸಮಾಜದ ಸದಸ್ಯರ ವೃತ್ತಿ ಮತ್ತು ಜಾತಿಗೆ ಅವಮಾನ ಎಸಗಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಮಂಗಳಾಪುರ ನಾಗರಾಜ್, ಪ್ರಚಾರ ಸಮಿತಿ ಅಧ್ಯಕ್ಷ ದೇವರಾಜೇಗೌಡ, ಸವಿತಾ ಸಮಾಜದ ನಗರಾಧ್ಯಕ್ಷ ಮುರುಗೇಶ್ ಮತ್ತು ಹಲವರು ಸಹಿ ಮಾಡಿರುವ ದೂರು ಪತ್ರವನ್ನು ವೃತ್ತ ನಿರೀಕ್ಷರಿಗೆ ಸಲ್ಲಿಸಲಾಯಿತು.

ವಿಧಾನ ಪರಿಷತ್ ಸದಸ್ಯರ ಸ್ಥಾನದಲ್ಲಿರುವ ವ್ಯಕ್ತಿಯಿಂದ ಇಂತಹ ಅಸಂವಿಧಾನಿಕ ಹಾಗು ಜಾತಿ ಅವಹೇಳನಕಾರಿ ಪದ ಬಳಕೆ ಜನರ ಮನಗಳಿಗೆ ನೋವು ತಂದಿದ್ದು, ಸಂಬಂಧಿತ ವಿಧಿನಿಯಮಗಳಡಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕಿದೆ ಎಂದು ಆಗ್ರಹಿಸಿದ್ದಾರೆ.

# ಅನ್ನಭಾಗ್ಯ ಯೋಜನೆ: ತೊಗರಿ ಬೇಳೆ ನೀಡಲು ತೀರ್ಮಾನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೆಂಗಳೂರು: ಅನ್ನಭಾಗ್ಯ ಯೋಜನೆಯಡಿ 5 ಕೆ.ಜಿ. ಅಕ್ಕಿ ಬದಲು ಇಂದಿರಾ ಆಹಾರ ಕಿಟ್ ಘೋಷಿಸಿದ್ದ ಸರ್ಕಾರ, ಅದರಲ್ಲಿ ನೀಡಲು ಉದ್ದೇಶಿಸಿದ್ದ ಆಹಾರ ಧಾನ್ಯಗಳನ್ನು ಪರಿಷ್ಕರಣೆ ಮಾಡಿದೆ.


ನಡೆದ ಸಂಪುಟ ಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಂಡಿದ್ದು, ಇಂದಿರಾ ಪೌಷ್ಟಿಕ ಆಹಾರ ಕಿಟ್ ಬದಲು ಇಂದಿರಾ ಕಿಟ್ ಎಂದು ತೀರ್ಮಾನಿಸಿದೆ. ಅಲ್ಲದೆ, ಕಿಟ್‌ನಲ್ಲಿ ಇರಬೇಕಿದ್ದ ಹೆಸರುಕಾಳಿನ ಬದಲು ಹೆಚ್ಚುವರಿ ತೊಗರಿಬೇಳೆ ನೀಡಲು ನಿರ್ಧರಿಸಿದೆ.



ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ವಿವರಣೆ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ಬಿಪಿಎಲ್ ಮತ್ತು ಅಂತ್ಯೋದಯ ಅನ್ನ ಕಾರ್ಡುದಾರರಿಗೆ ತಲಾ 5 ಕೆ.ಜಿ. ಕೊಡುವ ಅನ್ನಭಾಗ್ಯ ಯೋಜನೆಗೆ ರಾಜ್ಯ ಸರ್ಕಾರವು 6,426 ಕೋಟಿ ರೂ. ಅನುದಾನ ನಿಗದಿಪಡಿಸಿತ್ತು. ಅಕ್ಕಿಯ ಬದಲು ತೊಗರಿಬೇಳೆ, ಹೆಸರುಕಾಳು, ಅಡುಗೆ ಎಣ್ಣೆ, ಸಕ್ಕರೆ, ಉಪ್ಪು ಒಳಗೊಂಡ ಇಂದಿರಾ ಕಿಟ್‌ನ್ನು 6,119 ಕೋಟಿ ರೂ.ನಲ್ಲಿ ಕೊಡಲು ನಿರ್ಧರಿಸಿದ್ದೆವು ಎಂದರು.

## ಪಶು ಆರೋಗ್ಯದ ಕಡೆ ಗಮನ ಹರಿಸಿ : ಶಾಸಕ ಸಿಮೆಂಟ್ ಮಂಜು

# ಕರಡಿಗಾಲದಲ್ಲಿ ಹಾಲು ಕರೆಯುವ ಸ್ಪರ್ಧೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಪಶುಗಳ ಆರೋಗ್ಯದ ಕಡೆಗೆ ವೈದ್ಯರಲ್ಲದೇ ರೈತರೂ ಸಹ ಹೆಚ್ಚಿನ ಗಮನ ಹರಿಸುವುದು ಒಳಿತು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು

ಶುಕ್ರವಾರ ತಾಲ್ಲೂಕಿನ ಕರಡಿಗಾಲ ಗ್ರಾಮದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕಿಯ ಸೇವಾ ಇಲಾಖೆ ವತಿಯಿಂದ ಏರ್ಪಡಿಸಿದ್ದ ವಿಶೇಷ ಶಿಬಿರದಲ್ಲಿ ಶಾಸಕರು ಗೋ ಪೂಜೆ ನಡೆಸಿ ಹಸುವಿಗೆ? ಬಾಳೆ ಹಣ್ಣು ತಿನ್ನಿಸುವ ಮೂಲಕ ಪಶುಗಳ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ದೇಶದ ಬೆನ್ನೆಲುಬು ರೈತ ಎನ್ನುವುದು ಎಷ್ಟು ಸತ್ಯಮೋ ಹಸುಗಳು ಸಹ ರೈತನ ಜೀವನಾಡಿ ಎಂಬುಂದನ್ನು ಮರೆಯುವಂತಿಲ್ಲ, ಪಶುಗಳು ಇಲ್ಲವಾದರೆ ಕೃಷಿಕರ ಶಕ್ತಿಯೇ ಉಡುಗಿ ಹೋಗುತ್ತದೆ. ಹಾಗಾಗಿ ಪಶುಗಳ ಆರೋಗ್ಯದತ್ತ ನಿರ್ಲಕ್ಷ್ಯ ವಹಿಸಿದೇ ತಪಾಸಣೆ ಮಾಡಿಸಿಕೊಂಡು ರೋಗಗಳು ತಟ್ಟದಂತೆ ಜಾಗೃತಿ ವಹಿಸಬೇಕು.

ಇದರಿಂದ ಹೈನೋದ್ಯಮ ಬೆಳವಣಿಗೆ ಕಾಣುವುದಲ್ಲದೇ ರೈತರು ಆರ್ಥಿಕವಾಗಿ ಉನ್ನತಿ ಹೊಂದಲು ಸಾಧ್ಯವಾಗುತ್ತದೆ ಎಂದರು.ಹೈನುಗಾರಿಕೆ ಗ್ರಾಮೀಣ ಮಹಿಳೆಯರ ಸ್ವಾವಲಂಬಿ ಬದುಕು ಕಟ್ಟಿಕೊಡುವುದಲ್ಲದೆ ಆರ್ಥಿಕ ಮನ್ನುಡಿಗೆ ಸಹಕಾರಿಯಾಗಿದೆ.

ರೈತರು ಮುಖ್ಯವಾಗಿ ಜಾನುವಾರು ಖರೀದಿಯಲ್ಲಿ ಮೋಸ ಹೋಗದಂತೆ ಎಚ್ಚರಿಕೆ ವಹಿಸಬೇಕು. ಹಾಲು ಉತ್ಪಾದನೆಯೇ ಮುಖ್ಯ ಗುರಿಯಾಗಿರಾದೆ ಉತ್ತಮ ಗುಣಮಟ್ಟದ ಜಾನುವಾರು ಖರೀದಿಗೆ ಮುಂದಾಗಬೇಕು. ರೈತ ಎಂದು ಕೂಡ ಮೋಸ ಮಾಡುವುದಿಲ್ಲ ಆದರೆ ರೈತನಿಗೆ ಮೋಸ ಮಾಡಲೆಂದೆ ಕೆಲವು ನಕಲಿ ಕಂಪನಿಗಳು ಹುಟ್ಟಿಕೊಂಡಿವೆ. ಇದರ ಬಗ್ಗೆ ರೈತರು ಎಚ್ಚರದಲ್ಲಿರಬೇಕು ಎಂದು ತಿಳಿಸಿದರು. ಸಹಾಯಕ ನಿರ್ದೇಶಕ ವೆಂಕಟೇಶ್ ಮಾತನಾಡಿ, ಜಾನುವಾರುಗಳಿಗೆ ಕಾಲಕಾಲಕ್ಕೆ ತಕ್ಕಂತೆ ಲಸಿಕೆಗಳನ್ನು ಕೊಡಿಸಬೇಕು ಎಂದು ರೈತರಿಗೆ ಇಲಾಖೆಯಿಂದ ದೊರಕುವ ಸೌಲಭ್ಯ ಗಳ ಕುರಿತು ಮಾಹಿತಿ ನೀಡಿದರು.

ಹಾಲು ಕರೆಯುವ ಸ್ಪರ್ಧೆಯಲ್ಲಿ ಶೋಭಾ 16.14 ಕೆಜಿ, ಸಾಗರಿಕ 15.82 ಕೆಜಿ, ಮಣಿ 11.26 ಕೆಜಿ, ಕಮಲಮ್ಮ 10.92 ಕೆಜಿ ಹಾಲು ಕರೆಯುವ ಮೂಲಕ ಬಹುಮಾನ ಗಳಿಸಿದರು. ಈ ಸಂಧರ್ಭದಲ್ಲಿ ಕರಡಿಗಾಲ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷೆ ಭಾಗ್ಯಲಕ್ಷ್ಮಿ, ಸಂಘದ ಕಾರ್ಯದರ್ಶಿ ಶಿವಣ್ಣ, ಗ್ರಾ.ಪಂ ಸದಸ್ಯರಾದ ಆನಂದ್, ಸುದರ್ಶನ್, ಮುಖಂಡರಾದ ಕೃಷ್ಣೆಗೌಡ, ಹರೀಶ್, ಸೇರಿದಂತೆ ಪಶು ಇಲಾಖೆ ವೈದ್ಯರು ಗ್ರಾಮಸ್ಥರು ಉಪಸ್ಥಿತರಿದ್ದರು.

# ದಾಖಲೆ ಇಲ್ಲದ 34 ಲಕ್ಷ ರೂ. ವಶಕ್ಕೆ ಪಡೆದ ಐಟಿ ಅಧಿಕಾರಿಗಳು



ಬೇಲೂರು : ಕಳೆದ ಅಕ್ಟೋಬರ್ ತಿಂಗಳಲ್ಲಿ ದಾಖಲೆ ಇಲ್ಲದೆ ಸಾಗಿಸುತಿದ್ದ ವ್ಯಕ್ತಿಯಿಂದ 34 ಲಕ್ಷ ರೂ, ವಶಕ್ಕೆ ಪಡೆದಿದ್ದ ಬೇಲೂರು ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರೇವಣ್ಣ ಮತ್ತು ಸಿಬ್ಬಂದಿ, ವಶಕ್ಕೆ ಪಡೆದಿದ್ದ ಹಣವನ್ನು ಶುಕ್ರವಾರ ಮೈಸೂರು ವಿಭಾಗದ ಆದಾಯ ತೆರಿಗೆ ಇಲಾಖೆಯ ನಿರ್ದೇಶಕ ವೆಂಕಟೇಶನ್ ನೇತೃತ್ವದ ತಂಡಕ್ಕೆ ಹಸ್ತಾಂತರಿಸಿದರು.

2025ರ ಅಕ್ಟೋಬರ್ ತಿಂಗಳಲ್ಲಿ ಬೇಲೂರಿನ ನಿವಾಸಿ ವಾಸಿವ್ ಎಂಬುವವರು ರಮಗೆ ಸೇರಿದೆ ಎನ್ನಲಾದ 34 ಲಕ್ಷ ರೂ. ಹಣವನ್ನು ದಾಖಲೆ ಇಲ್ಲದೆ ವಾಹನದಲ್ಲಿ ಸಾಗಿಸುತ್ತಿದ್ದ ಸಂದರ್ಭ ಬೇಲೂರು ಪೊಲೀಸ್ ಇನ್ಸ್ ಪೆಕ್ಟರ್ ರೇವಣ್ಣ ನೇತೃತ್ವದಲ್ಲಿ ಸಿಬ್ಬಂದಿ ಬೇಲೂರು ಪೊಲೀಸ್ ಠಾಣೆ ಮುಂಭಾಗದಲ್ಲಿ ತಪಾಸಣೆ ನಡೆಸಿ ದಾಖಲೆ ಇಲ್ಲದ ಹಣವನ್ನು ವಶಕ್ಕೆ ಪಡೆದಿದ್ದರು. ನಂತರ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ 34 ಲಕ್ಷ ರೂ, ಗೆ ಸರಿಯಾದ ದಾಖಲೆ ಕೊಡುವಂತೆ ತಿಳಿಸಿ ಪೊಲೀಸ್ ಅಧಿಕಾರಿಗಳು ಅಂದೇ ಹಾಸನದ ಆಧಾಯ ತೆರಿಗೆ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದು ಹಣವನ್ನು ವಶದಲ್ಲಿ ಇಟ್ಟುಕೊಂಡಿದ್ದರು. ಜತೆಗೆ ವಸಿಮ್ ಎಂಬ ವ್ಯಕ್ತಿಗೆ ಹಣ ನಿಮ್ಮದಾದರೆ ಸೂಕ್ತ ದಾಖಲಾತಿ ತಂದು ಹಣವನ್ನು ವಾಪಸ್ ಪಡೆದು ಕೊಳ್ಳಬಹುದು ಎಂದು ತಿಳಿಸಿ ಕಳುಹಿಸಲಾಗಿತ್ತು. ಆದರೆ ನಮ್ಮದು ಎಂದು ಹೇಳಲಾಗಿದ್ದ ವ್ಯಕ್ತಿ ಇಲ್ಲಿವರೆಗೂ ಹಣಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ದಾಖಲೆಗಳನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಅಥವಾ ಪೊಲೀಸ್ ಇಲಾಖೆಗೆ ನೀಡದೇ ಇದ್ದ ಕಾರಣ ಶುಕ್ರವಾರ ಮೈಸೂರು ವಿಭಾಗದ ಆಧಾಯ ತೆರಿಗೆ ಇಲಾಖೆಯ ನಿರ್ದೇಶಕ ವೆಂಕಟೇಶನ್ ನೇತೃತ್ವದ ತಂಡಕ್ಕೆ ಬೇಲೂರು ಪೋಲಿಸ್ ವಶಕ್ಕೆ ಪಡೆದು ಕೊಂಡಿದ್ದ 34 ಲಕ್ಷ ರೂ, ಹಣವನ್ನು ಪೊಲೀಸ್ ಠಾಣೆಯಲ್ಲಿ ಮಹಜರು ಮೂಲಕ ಸಾಕ್ಷಿದಾರರ ಸಮ್ಮುಖದಲ್ಲಿ ಹಸ್ತಾಂತರಿಸಿದರು.

ಬೇಲೂರು ಪೊಲೀಸ್ ಠಾಣೆ ಇನ್ಸ್ ಪೆಕ್ಟರ್ ರೇವಣ್ಣ, ಪಿಎಸ್‌ಐ ಶಿವನಗೌಡ.ಜಿ.ಪಾಟೀಲ್, ಪೊಲೀಸ್ ಸಿಸಿಬ್ಬಂದಿ ದೇವರಾಜು, ರಮೇಶ್, ಅಣ್ಣಪ್ಪ, ಉಮೇಶ್ ಸೇರಿದಂತೆ, ಮೈಸೂರಿನ ಆಧಾಯ ತೆರಿಗೆ ಇಲಾಖೆಯ ಅಧಿಕಾರಿಗಳಿದ್ದರು.

# ಅತಿವೃಷ್ಟಿ ಹಾನಿ : ವಿವಿಧ ಬೆಳೆಗಳಿಗೆ ಕೊಳೆ ರೋಗ, ಶೀತಬಾಧೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಮುಂಗಾರು ಆರಂಭದಿಂದ ಹಿಂಗಾರು ಹಂಗಾಮಿನ ಮಧ್ಯದವರೆಗೂ ಹೋಬಳಿಯಾದ್ಯಂತ ಸುರಿದ ಸತತ ಮಳೆಗೆ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದ ಹತ್ತಿ, ಜೋಳ, ಸೂರ್ಯಕಾಂತಿ ಹಾಗೂ ಶುಂಠಿ ಬೆಳೆಯು ಶೀತದ ಪ್ರಭಾವಕ್ಕೆ ಕೊಳೆತು ಹೋಗಿದ್ದು, ನೂರಾರು ಎಕರೆ ವ್ಯಾಪ್ತಿಯ ಅಡಕೆ ಮರಗಳಿಗೂ ಹಾನಿಯಾಗಿದ್ದು, ರೈತರು ಕಂಗಾಲಾಗಿದ್ದಾರೆ.

ಮೂರು ಸಾವಿರಕ್ಕೂ ಅಧಿಕ ಹೆಕ್ಟೇರ್ ವಲಯದಲ್ಲಿ ಬಿತ್ತನೆಯಾಗಿದ್ದ ಹತ್ತಿ ಬೆಳೆಯು ಅತಿವೃಷ್ಟಿಯಿಂದ ಕೈಕೊಟ್ಟಿದ್ದು, ಹೂವಾಗದೆ ಕಾಯಿಯ ಹಂತದಲ್ಲೇ ಉದುರಿಹೋಗಿದೆ. ಜೋಳ ಹಾಗೂ ಸೂರ್ಯಕಾಂತಿ ಬೆಳೆಯು ಹೊಲದಲ್ಲೇ ಕರಗಿ ಹೋಗುತ್ತಿದೆ. ಕೆಲವೆಡೆ ಹತ್ತಿಯನ್ನು ಬಿಡಿಸುವ ಹಂತದಲ್ಲಿ ಆರ್ಭಟಿಸಿದ ಹಿಂಗಾರು ಮಳೆಯು ಇಡೀ ಹೊಲದ ಇಳುವರಿಯನ್ನು ಆಪೋಶನ ತೆಗೆದುಕೊಂಡಿದೆ. ಶುಂಠಿಗೆ ಉತ್ತಮ ಬೆಲೆ ಸಿಗುತ್ತಿದ್ದರೂ , ಬಿಳಿಸುಳಿ ರೋಗದ ಪರಿಣಾಮ ನಿರೀಕ್ಷಿಸಿದಷ್ಟು ಬೆಳೆಯು ಕೈಗೆ ಸಿಗದೆ ನಷ್ಟ ಅನುಭವಿಸುವಂತಾಗಿದೆ. ಕಳೆದ ಐದು ದಿನದಿಂದ ಮಳೆಯು ಇಳಿಮುಖವಾಗಿ ಬಿಸಿಲು ಏರುತ್ತಿರುವುದು ರೈತರಲ್ಲಿ ಸ್ವಲ್ಪ ಸಮಾಧಾನ ತಂದಿದೆ. ಆದರೆ, ಈಗಾಗಿರುವ ನಷ್ಟವನ್ನು ಪರಿಹರಿಸಿಕೊಳ್ಳುವುದು ಹೇಗೆ ಎಂದು ಚಿಂತಿತರಾಗಿದ್ದಾರೆ. ಅನಾವೃಷ್ಟಿಯ ಕಾಲದಲ್ಲಿ ಅಂತರ್ಜಲ ಬಳಸಿ, ನೀರು ಹಾಯಿಸಿ ಬೆಳೆ ಕಾಪಾಡಿಕೊಂಡು ವ್ಯವಹಾರ ಮಾಡುತ್ತಿದ್ದೆವು. ಈಗ ಸತತ ಆರು ತಿಂಗಳು ಸುರಿದ ಮಳೆಗೆ ಹೊಲದೊಳಗೆ ಕಾಲಿಡಲೂ ಆಗದ ಸ್ಥಿತಿ ನಿರ್ಮಾಣವಾಯಿತು. ಇದಲ್ಲದೆ, ಹಳೇಬೀಡಿನ ಪ್ರಸಿದ್ಧ ದ್ವಾರಸಮುದ್ರ ಕೆರೆಯು ಆರು ತಿಂಗಳಿಂದಲೂ ತುಂಬಿ ರಭಸವಾಗಿ ಹರಿಯುತ್ತಿದೆ. ಕೆರೆಯ ಪಾತ್ರದ ತೋಟ, ಗದ್ದೆಗಳು ಜಲಾವೃತವಾಗಿ, ಶೀತಪೀಡಿತವಾಗಿದೆ. ಪಸಕ್ತ ಹಂಗಾಮಿನ ಎಲ್ಲ ಬೆಳೆಗಳೂ ನಾಶವಾಗಿದೆ ಎಂದು ರೈತರು ಅಳಲು ತೋಿಕೊಳ್ಳುತ್ತಾರೆ.

### ಮಳೆ ಬಿಟ್ಟರೂ ಸಮಸ್ಯೆ ಮುಂದುವರಿಕೆ

ಹೊಲಗಳಲ್ಲಿ ಟೊಮಾಟೊ ಗಿಡಗಳು ನೆಲಕಚ್ಚಿದ್ದು, ಮೋಡಕವಿದ ವಾತಾವರಣ ಇರುವುದರಿಂದ ಮತ್ತೆ ಮೇಲೇಳುವ ಲಕ್ಷಣಗಳು ಕಾಣಿಸುತ್ತಿಲ್ಲ. ಸತತವಾಗಿ ಸುರಿದ ಮಳೆಯ ಪರಿಣಾಮ ರೈತರು ತೆಂಗು ಹಾಗೂ ಬಾಳೆಯ ತೋಟಗಳಿಗೆ ಕಾಲಿಡಲು ಸಾಧ್ಯವಾಗಲಿಲ್ಲ. ಪರಿಣಾಮ,ಮರದಿಂದ ಉದುರಿದ ಕಾಯಿ ಆರಿಸಲೂ ಆಗದೆ ಅಲ್ಲೇ ಕೊಳೆತುಹೋಗಿವೆ. ಬಾಳೆ ಬೆಳೆಯುವವರು ಊಟದ ಎಲೆಗಳಿಗಾಗಿ ಗಿಡಗಳನ್ನು ಬಹುಕಾಲ ಕಾಪಾಡುತ್ತಾರೆ. ಸಾವಿರ ಸಂಖ್ಯೆಯಲ್ಲಿ ಎಲೆಗಳನ್ನು ಕೊಯ್ಯಲು ಗುತ್ತಿಗೆ ಕೊಟ್ಟು, ವ್ಯವಹಾರ ನಡೆಸುತ್ತಾರೆ. ಪ್ರಸ್ತುತ ಮಳೆ ಹಾಗೂ ಗಾಳಿಯ ಹೊಡೆತಕ್ಕೆ ಎಲೆಗಳು ಹರಿದುಹೋಗಿರುದರಿಂದ ಆ ಉದ್ಯಮಕ್ಕೂ ಹೊಡೆತ ಬಿದ್ದಿದೆ. ಬಾಳೆಗೊನೆಗಳು ಬಲಿಯುವ ಮೊದಲೇ ಉದುರಿಹೋಗಿವೆ. ತರಕಾರಿ ಬೆಳಯುವವರ ಪಾಡು ಇನ್ನಷ್ಟು ಕಠಿಣವಾಗಿದ್ದು, ವಿಪರೀತ ಮಳೆಗೆ ಯಾವ ಬೆಳೆ ಮಾಡಬೇಕು ಎಂಬ ಗೊಂದಲದಲ್ಲೇ ಹಂಗಾಮು ಮುಗಿದುಹೋಗಿದೆ. ಹಳೇಬೀಡುಮಲ್ಲಾಪುರ ರಸ್ತೆಯಲ್ಲಿರುವ ಬಿದುರುಕೆರೆಯೂ ಹಿಂಗಾರು ಮಳೆಯ ರಭಸಕ್ಕೆ ಕಳೆದ ವಾರದಿಂದ ತುಂಬಿ ಹರಿಯುತ್ತಿದ್ದು, ಕೆರೆಯ ಪಾತ್ರದ ತೋಟಗಳು ಜಲಾವೃತವಾಗಿದೆ.

> ಅತಿವೃಷ್ಟಿಯಿಂದ ಹಳೇಬೀಡು ಹೋಬಳಿಯಲ್ಲಿ ಹಾನಿಯಾಗಿದೆ. ಬೇಲೂರು ತಾಲೂಕಿನ ವಿವಿಧ ಹೋಬಳಿಗಳು ಸತತ ಮಳೆಯಿಂದ ನಲುಗಿವೆ. ಬೆಳೆಹಾನಿಯ ಸಾಕ್ಷಾತ್ ವರದಿ ಪಡೆದುಕೊಂಡು ಸರ್ಕಾರಕ್ಕೆ ಅಂಕಿ ಅಂಶದ ಸಹಿತ ಪ್ರಸ್ತಾವನೆ ಸಲ್ಲಿಸಿ ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಅನ್ನದಾತರ ವಿಷಯದಲ್ಲಿ ಸರ್ಕಾರವೂ ರಾಜಕೀಯ ಮಾಡದೆ ಪರಿಹಾರ ಒದಗಿಸಲು ಮುಂದಾಗಬೇಕು
>
> 
>
> **– ಹೆಚ್.ಕೆ.ಸುರೇಶ್.**
> **ಶಾಸಕ. ಬೇಲೂರು ವಿಧಾನಸಭಾ ಕ್ಷೇತ್ರ.**

> ಸತತ ಮಳೆಯ ಕಾರಣ ಕಳೆದ ಆರು ತಿಂಗಳಿಂದ ಕೃಷಿ ಚಟುವಟಿಕೆಯು ಸಂಪೂರ್ಣ ಸ್ಥಗಿತವಾಗಿತ್ತು. ಫಸಲು ಕೈಗೆ ಸಿಗದೆ ನಿತ್ಯ ಖರ್ಚಿಗೂ ರೈತರು ಪರದಾಡುವಂತಾಗಿದೆ. ಸರ್ಕಾರ ಈ ಭಾಗದಲ್ಲಿ ಪರಿಶೀಲನೆ ನಡೆಸಿ ನ್ಯಾಯಯುತ ಪರಿಹಾರ ಕೊಟ್ಟರೆ ರೈತರು ಸ್ವಲ್ಪ ಮಟ್ಟಿಗೆ ಚೇತರಿಸಿಕೊಳ್ಳಬಹುದು
>
> 
>
> **ಎಲ್. ಇ. ಶಿವಪ್ಪ**
> **ರೈತ. ಹಳೇಬೀಡು ಹೋಬಳಿ**

### ಹಳ್ಳದ ನೀರಿನ ರಭಸ: ಆತಂಕದಲ್ಲಿ ಬೂದಿಗುಂಡಿ ನಿರಾಶ್ರಿತರು.



ದ್ವಾರಸಮುದ್ರ ಕೆರೆಯ ಕೋಡಿಹಳ್ಳದ ಅಂಚಿನಲ್ಲಿ ದಶಕಗಳಿಂದ ಶೆಡ್ ನಿರ್ಮಿಸಿಕೊಂಡು ವಾಸವಿರುವ ನಿರಾಶ್ರಿತರಿಗೆ, ಆರು ತಿಂಗಳಿಂದ ಹಳ್ಳದಲ್ಲಿ ರಭಸವಾಗಿ ಹರಿಯುತ್ತಿರುವ ನೀರು ತೀವ್ರ ಆತಂಕವನ್ನು ತಂದೊಡ್ಡಿದೆ. ಹಳ್ಳದಂಚಿನ ಭೂಮಿಯು ನೀರಿನ ಒರತೆಯಿಂದ ಕುಸಿಯುತ್ತಿದ್ದು, ಅತಿವೃಷ್ಟಿಯ ಪರಿಣಾಮ ಅಪಾಯದ ಮುನ್ಸೂಚನೆ ನೀಡುತ್ತಿದೆ. 2009ನೇ ಇಸವಿಯ ಅಂತ್ಯಭಾಗದಲ್ಲಿ ಸುರಿದ ಭಾರಿ ಮಳೆಗೆ ದ್ವಾರಸಮುದ್ರ ಕೆರೆಯು ತುಂಬಿ ಕೋಡಿಹಳ್ಳದಲ್ಲಿ ನೀರು ರಭಸವಾಗಿ ಹರಿದ ಪರಿಣಾಮ ಮೂರು ಮನೆಗಳು ಕೊಚ್ಚಿಹೋಗಿದ್ದವು. ಈಗ ಅದೇ ರೀತಿಯ ಪರಿಸ್ಥಿತಿ ಉದ್ಭವಿಸಿದ್ದು, ಮುಂದಿನ ದಿನಗಳಲ್ಲಿ ಮತ್ತೆ ಮಳೆಯು ಸುರಿದರೆ ಅಪಾಯ ನಿಶ್ಚಿತ ಎಂಬ ಆತಂಕ ನಿವಾಸಿಗಳಲ್ಲಿ ಮನೆಮಾಡಿದೆ. ನಿರಾಶ್ರಿತರಿಗೆ ಒಂಟೆಮಳ್ಳಿಯ ಗುಡ್ಡದ ಬಳಿಯ ಸರ್ವೆ ನಂಬರ್ 263ರ ಸರ್ಕಾರಿ ಜಾಗದಲ್ಲಿ ಪುನರ್ವಸತಿ ಕಲ್ಪಿಸಬೇಕು ಎಂಬ ವಿಚಾರ ಮೂರು ವರ್ಷದ ಹಿಂದೆ ಮುನ್ನೆಲೆಗೆ ಬಂದಿತ್ತು. ಆದರೆ, ಇಲ್ಲಿಯವರೆಗೂ ಯಾರೂ ಇದರ ಬಗ್ಗೆ ಯೋಚಿಸಿಲ್ಲ ಎಂದು ಬೂದಿಗುಂಡಿ ನಿರಾಶ್ರಿತರು ಹೇಳುತ್ತಾರೆ. ಇದರ ನಡುವೆ, ಕಳೆದ ವಾರ ಸುರಿದ ಹಿಂಗಾರು ಮಳೆಯ ಹೊಡೆತಕ್ಕೆ ಇದೇ ಪ್ರದೇಶದಲ್ಲಿ ನಿರ್ಮಿಸಿಕೊಂಡಿದ್ದ ಎರಡು ಮನೆಗಳು ಕುಸಿದ ಬಿದ್ದಿವೆ.

# ವಿದ್ಯುತ್ ಉತ್ಪಾದನೆಗಾಗಿ 500 ಮೆಟ್ರಿಕ್‌ಟನ್ ಒಣತ್ಯಾಜ್ಯ ಪೂರೈಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ನಗರದ ಕಸದಲ್ಲಿ ವಿಂಗಡಿಸಲಾದ 600 ಮೆಟ್ರಿಕ್ ಟನ್ ಒಣ ತ್ಯಾಜ್ಯದ ಕೋಟಾದಲ್ಲಿ ಪ್ರಸ್ತುತ ಪ್ರತಿದಿನ 200 ಮೆಟ್ರಿಕ್ ಟನ್ (ಒಖ) ಮಾತ್ರ ವಿದ್ಯುತ್ ಉತ್ಪಾದನೆಗೆ ಕಳುಹಿಸಲಾಗುತ್ತಿದೆ.

ಹೀಗಾಗಿ, ವಿಂಗಡಣೆ ಪ್ರಕ್ರಿಯೆಯನ್ನು ವೇಗಗೊಳಿಸುವ ಮೂಲಕ ಈ ಪ್ರಮಾಣವನ್ನು 500 ಮೆಟ್ರಿಕ್ ಟನ್‌ಗೆ ಹೆಚ್ಚಿಸುವ ಗುರಿಯನ್ನು ಹೊಂದಲಾಗಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಪ್ರಾಧಿಕಾರ (ಃಒಐ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕರೀ ಗೌಡ ತಿಳಿಸಿದ್ದಾರೆ.

ಬಿಡದಿಯಲ್ಲಿರುವ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರವನ್ನು ಪರಿಶೀಲಿಸಿದ ಕರಿಗೌಡ, ವಿದ್ಯುತ್ ತಯಾರಿಸಲು 400 ಟನ್ ತ್ಯಾಜ್ಯವನ್ನು ಮಂಡೂರಿನ ತ್ಯಾಜ್ಯ ವಿಂಗಡಣೆ ಮತ್ತು ಒಣ ತ್ಯಾಜ್ಯ ಸಂಗ್ರಹಣಾ ಘಟಕಗಳಿಂದ ಪ್ರತಿದಿನ ಪೂರೈಸಲಾಗುತ್ತಿದೆ ಎಂದು ಹೇಳಿದರು.

ಮನೆಗಳಿಂದ ಸಂಗ್ರಹಿಸಲಾದ ಒಣ ತ್ಯಾಜ್ಯವನ್ನು ಬೇರ್ಪಡಿಸುವ ಕಾರ್ಯವನ್ನು ತ್ವರಿತಗೊಳಿಸಿ ದಿನಕ್ಕೆ 500ಒಖ ತ್ಯಾಜ್ಯ ಪೂರೈಸಲು ಎಂಜಿನಿಯರ್‌ಗಳಿಗೆ ನಿರ್ದೇಶನ ನೀಡಲಾಗಿದೆ. ನವೆಂಬರ್ ಅಂತ್ಯದ ವೇಳೆಗೆ, ನಾವು ಮಂಡೂರನ್ನು ಅವಲಂಬಿಸುವುದನ್ನು ನಿಲ್ಲಿಸುತ್ತೇವೆ ಎಂದು ಕರಿಗೌಡ ತಿಳಿಸಿದ್ದಾರೆ.

ಬಿಡದಿಯಲ್ಲಿ ಸ್ಥಾಪನೆಯಾಗಿರುವ ಸ್ಥಾವರ ನಿತ್ಯ 11.5 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುತ್ತಿದೆ. ಈಗ ಮನೆ ಮನೆ ಕಸ ಸಂಗ್ರಹಿಸುವಾಗಲೇ ವಿಂಗಡಣೆ ಕಡ್ಡಾಯ ಮಾಡಲಾಗಿದೆ. ಮಿಶ್ರ ತ್ಯಾಜ್ಯದಿಂದ ಆರ್‌ಡಿಎಫ್ (ಖಜಿ ಆಡಿಜ ಈಟ) ಅನ್ನು ಬೇರ್ಪಡಿಸಿ ಬಿಡದಿ ಘಟಕಕ್ಕೆ ಕಳುಹಿಸಲಾಗುತ್ತಿದೆ.

ಇದರ ಪರಿಣಾಮವಾಗಿ, ಕಳೆದ ತಿಂಗಳು ಲ್ಯಾಂಡ್‌ಫಿಲ್‌ಗೆ ಹೋಗುತ್ತಿದ್ದ 390 ಕಾಂಪ್ಯಾಕ್ಟರ್‌ಗಳ ಸಂಖ್ಯೆ 340ಕ್ಕೆ ಇಳಿದಿದೆ. ನಗರವಾಸಿಗಳು ಮನೆಯಲ್ಲೇ ಒಣ ಮತ್ತು ಹಸಿ ಕಸವನ್ನು ವಿಂಗಡಿಸಿ ಆಟೊ ಟಿಪ್ಪರ್‌ಗಳಿಗೆ ನೀಡಿದರೆ, ಬಿಡದಿ ಮಾದರಿಯಲ್ಲಿ ಇನ್ನೂ ಮೂರು ಘಟಕಗಳನ್ನು ಸ್ಥಾಪಿಸಿ ಒಂದು ಲಕ್ಷ ಮನೆಗಳಿಗೆ ವಿದ್ಯುತ್ ಪೂರೈಸಬಹುದು ಎಂದು ಅವರು ತಿಳಿಸಿದರು.

ಪ್ರತಿ ಮನೆಯು ದಿನಕ್ಕೆ ಸರಾಸರಿ ಐದು ಯೂನಿಟ್ ವಿದ್ಯುತ್ ಬಳಸಿದರೆ, ಸುಮಾರು 25,000 ಮನೆಗಳಿಗೆ ವಿದ್ಯುತ್ ಪೂರೈಸಲು ಸಾಧ್ಯವಿದೆ. ತ್ಯಾಜ್ಯ ವಿಂಗಡಣೆಯನ್ನು ಸುಧಾರಿಸಿದರೆ, ಇನ್ನೂ ಮೂರು ಘಟಕಗಳನ್ನು ಸ್ಥಾಪಿಸಬಹುದು ಮತ್ತು ಒಂದು ಲಕ್ಷ ಮನೆಗಳಿಗೆ ವಿದ್ಯುತ್ ಪೂರೈಸಬಹುದು ಎಂದು ಏಅಖ ಕಾರ್ಯನಿರ್ವಾಹಕ ಎಂಜಿನಿಯರ್ ಸತೀಶ್ ಕುಮಾರ್ ಹೇಳಿದರು.

## ಇತಿಹಾಸದಲ್ಲಿ ಈ ದಿನ

### ನವೆಂಬರ್-08

1895: ಜರ್ಮನಿಯ ಭೌತಶಾಸ್ತ್ರಜ್ಞ ವಿಲ್ಹೆಲ್ಮ್ ಕಾಂರಾಡ್ ರೋಂಟ್ಗೆನ್ ಅವರು ಎಕ್ಸ್ ಕಿರಣಗಳನ್ನು ಆವಿಷ್ಕರಿಸಿದರು.

1923: ಅಡಾಲ್ಫ್ ಹಿಟ್ಲರ್ ಜರ್ಮನಿಯಲ್ಲಿ ಬಿಯರ್ ಹಾಲ್ ಪುಟ್ಷ್ ಎಂಬ ಅಸಫಲ ತಿರುಗಿ ಬೀಳುವ ಪ್ರಯತ್ನ ನಡೆಸಿದರು.

1965: ಲಂಡನ್‌ನ ಪ್ರಸಿದ್ಧ ಮರ್ಡಾಕ್ ಪೇಪರ್ಸ್ ಪತ್ರಿಕೆಗಳ ಸಂಘಟನೆಯು ಮೊದಲ ಬಾರಿಗೆ ಪ್ರಕಟವಾಯಿತು.

2016: ಭಾರತದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 500 ರೂ. ಮತ್ತು 1000 ರೂ. ಮುಖ ಬೆಲೆಯ ನೋಟುಗಳನ್ನು ಅಮಾನ್ಯಗೊಳಿಸುವ ನೋಟು ಬದಲಿ ನಿರ್ಧಾರವನ್ನು ಘೋಷಿಸಿದರು.

**ಜನನ**

1847: ಬ್ರಹ್ಮ ಸಮಾಜದ ಪ್ರಮುಖ ಚಿಂತಕ ಮತ್ತು ಸಾಮಾಜಿಕ ಸುಧಾರಕ ಬ್ರಜೇಂದ್ರನಾಥ ಸೀಲ್

1927: ಭಾರತೀಯ ಪುರಾತತ್ವ ಶಾಸ್ತ್ರಜ್ಞ ಹಾಗೂ ಇತಿಹಾಸಕಾರ ಎಸ್. ಆರ್. ರಾವ್

1935: ಖ್ಯಾತ ಬ್ರಿಟಿಷ್ ಹಾಸ್ಯ ನಟ ಅಲನ್ ಡೆಲನ್

1975: ಹಿಂದಿ ಚಿತ್ರರಂಗದ ಜನಪ್ರಿಯ ನಟಿ ತಾರಾ ಶರ್ಮಾ

**ಮರಣ**

1674: ಮಹಾರಾಷ್ಟ್ರದ ಪ್ರಸಿದ್ಧ ಸಂತ ಕವಿ ತುಕಾರಾಮ ಮಹಾರಾಜರ ಪುತ್ರ ನಾರಾಯಣಬಾಬಾ

1994: ಭಾರತದ ಪ್ರಸಿದ್ಧ ಕಥೆಗಾರ ಹಾಗೂ ಚಿಂತಕ ಆರ್.ಕೆ. ನಾರಾಯಣ

## ಕಬ್ಬು ಪ್ರತಿ ಟನ್‌ಗೆ 3300 ರೂ. ದರ ನೀಡಲು ಸರ್ಕಾರ ಮಹತ್ವದ ನಿರ್ಧಾರ

# ಸಬ್ಸಿಡಿ ಘೋಷಣೆ : ರೈತರ ಹೋರಾಟಕ್ಕೆ ಗೆಲುವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಪ್ರತಿ ಟನ್ ಕಬ್ಬಿಗೆ 3300 ರೂ. ನೀಡಲು ಸರ್ಕಾರ ಮಹತ್ವದ ನಿರ್ಧಾರವನ್ನು ಕರ್ನಾಟಕ ಸರ್ಕಾರ ಕೈಗೊಂಡಿದೆ. ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಪ್ರತಿ ಟನ್‌ಗೆ ನೀಡುವ 3300 ರೂಪಾಯಿಯಲ್ಲಿ ಕಾರ್ಖಾನೆಯಿಂದ 3,250 ರೂ. ನೀಡಬೇಕು, ಉಳಿದಂತೆ ಸರ್ಕಾರದಿಂದ 50 ರೂ. ಸಬ್ಸಿಡಿ ನೀಡಲು ನಿರ್ಧಾರ ಮಾಡಲಾಗಿದೆ. ಈ ಮೊತ್ತ ಕಟಾವು ಮತ್ತು ಸಾಗಣಿಕೆ ವೆಚ್ಚ ಹೊರತುಪಡಿಸಿದ್ದಾಗಿರುತ್ತದೆ. ಇದು ರೈತರ ಹೋರಾಟಕ್ಕೆ ಸಿಕ್ಕ ಜಯವಾಗಿದೆ.

ಕಬ್ಬು ಬೆಳೆಗಾರರ ಬೇಡಿಕೆ ಏನು? 3,500 ರೂ. ಕೊಡೋಕೆ ಏಕೆ ಆಗ್ತಿಲ್ಲ? ಬೆಳಗಾವಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಮಲ್ಲಣ್ಣ ಯಾದವಾಡ ಹೇಳಿದ್ದೇನು?

ಬೆಳಗಾವಿಯಲ್ಲಿ ಪ್ರತಿಭಟನಾನಿರತ ಕಬ್ಬು ಬೆಳೆಗಾರರು ಮತ್ತು ರೈತ ಸಂಘಟನೆಗಳ ಪರವಾಗಿ ಸತತ 7 ಗಂಟೆಗಳ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತರ ಪರ ಖಚಿತ ನಿಲುವು ತೆಗೆದುಕೊಂಡು, ಟನ್ ಕಬ್ಬಿಗೆ 3300 ರೂ ಕೊಡಲು ನಿರ್ಧರಿಸಿದರು. ಸತತ ಏಳು ಗಂಟೆಗಳ ನಿರಂತರ ಸಭೆ ಬಳಿಕ ಮುಖ್ಯಮಂತ್ರಿಗಳು ಪತ್ರಿಕಾಗೋಷ್ಠಿ ನಡೆಸಿ ಸರ್ಕಾರದ ನಿರ್ಧಾರ ಪ್ರಕಟಿಸಿದರು.

ಸರ್ಕಾರ ಮತ್ತು ಕಾರ್ಖಾನೆ ಮಾಲೀಕರು ತಲಾ 50ರೂ ಸೇರಿಸಿ ರೈತರಿಗೆ ಟನ್ ಗೆ 3300 ಕೊಡಲು ತೀರ್ಮಾನ ಮಾಡಲಾಗಿದೆ. ರಾಜ್ಯದಲ್ಲಿ 81 ಸಕ್ಕರೆ ಕಾರ್ಖಾನೆಗಳಿವೆ. ಇವುಗಳಲ್ಲಿ 11 ಸಹಕಾರಿ ಕಾರ್ಖಾನೆಗಳು ಒಂದು ಕಾರ್ಖಾನೆ ಮಾತ್ರ ಸರ್ಕಾರಿ ಸೌಮ್ಯದ್ದು. ಕ್ಯಾಬಿನೆಟ್ ತೀರ್ಮಾನದಂತೆ ಇಂದು ಬೆಳಗ್ಗೆಯಿಂದ ಸತತ 7 ಗಂಟೆ ಕಾಲ ಸಭೆ ನಡೆಸಿದ್ದೇವೆ. ಈ ವೇಳೆ ಕಾರ್ಖಾನೆ ಮಾಲೀಕರು ಮತ್ತು ರೈತರು ತಮ್ಮ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ಇಬ್ಬರೂ ಕೇಂದ್ರ ಸರ್ಕಾರದ ನೀತಿಗಳಿಂದ ಆಗಿರುವ ನಷ್ಟ ಮತ್ತು ಸಮಸ್ಯೆಗಳನ್ನೂ ಹೇಳಿಕೊಂಡಿದ್ದಾರೆ. ಕೇಂದ್ರದಿಂದ ಆಗುತ್ತಿರುವ ತೊಂದರೆ ಬಗ್ಗೆ ಚರ್ಚಿಸಲು ಕೇಂದ್ರಕ್ಕೆ ನಿಯೋಗ ಹೋಗಲು ತೀರ್ಮಾನಿಸಿದ್ದೇವೆ. ಇದಕ್ಕೆ ಮಾಲೀಕರುಗಳೂ ಒಪ್ಪಿಕೊಂಡಿದ್ದಾರೆ



ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಕಬ್ಬಿನ ಇಳುವರಿ ಪ್ರಮಾಣ ಜಿಲ್ಲೆಯಿಂದ ಜಿಲ್ಲೆಗೆ ವ್ಯತ್ಯಾಸ ಆಗುತ್ತದೆ. ಆದರೆ, ಎಲ್ಲಾ ಇಳುವರಿಗೂ 100ರೂ ಹೆಚ್ಚಳ ಆಗಲಿದೆ ಎಂದು ಸ್ಪಷ್ಟಪಡಿಸಿದರು.

ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಬದ್ಧವಾಗಿದೆ. ಈ ಹಿನ್ನೆಲೆಯಲ್ಲಿಯೇ, ಸಕ್ಕರೆ ಎಂಎಸ್ಪಿ ಹೆಚ್ಚಳ ಸೇರಿದಂತೆ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸಲು ಕೋರಿ ಪ್ರಧಾನಿಯವರಿಗೆ ಈಗಾಗಲೇ ಪತ್ರ ಬರೆಯಲಾಗಿದ್ದು, ಅವರು ಸಮಯ ನೀಡಿದರೆ ನಾಳೆಯೇ ಕೇಂದ್ರಕ್ಕೆ ನಿಯೋಗ ಕರೆದುಕೊಂಡು ಹೋಗಲು ಸಿದ್ಧರಿದ್ದೇವೆ. ಇದರಲ್ಲಿ ಯಾವುದೇ ರಾಜಕೀಯವಿಲ್ಲ. ರೈತರ ಹಿತದೃಷ್ಟಿಯಿಂದ ಕೈಗೊಳ್ಳುವ ತೀರ್ಮಾನಗಳನ್ನು ಎಲ್ಲರೂ ಒಪ್ಪಿಕೊಳ್ಳಬೇಕು ಎಂದು ಸಿಎಂ ತಿಳಿಸಿದ್ದಾರೆ.

ಸಕ್ಕರೆಗೆ ಎಮ್‌ಎಸ್ಪಿ ನಿಗದಿಪಡಿಸುವುದು ಕೇಂದ್ರ ಸರ್ಕಾರ. ಇದೇ ರೀತಿ ಕಬ್ಬಿಗೆ ಎಫ್‌ಆರ್‌ಪಿ ನಿಗದಿಪಡಿಸುವವರು ಕೇಂದ್ರ ಸರ್ಕಾರ. ಎಥೆನಾಲ್ ಹಂಚಿಕೆ ನಿಗದಿಪಡಿಸುವವರು ಕೇಂದ್ರ ಸರ್ಕಾರ. ಸಕ್ಕರೆ ರಫ್ತು ಮಿತಿ ನಿಗದಿಪಡಿಸುವವರು ಸಹ ಕೇಂದ್ರ ಸರ್ಕಾರ.

ರೈತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಎಫ್‌ಆರ್‌ಪಿ ನಿಗದಿಪಡಿಸುವುದು ಕೇಂದ್ರ ಸರ್ಕಾರದ ಕೆಲಸ. ಕೇಂದ್ರ ಸರ್ಕಾರ ದಿನಾಂಕ 6-05-2025ರಂದು ಕಬ್ಬಿಗೆ ಎಫ್‌ಆರ್‌ಪಿ ನಿಗದಿಪಡಿಸಿದೆ. ಈ ಎಫ್‌ಆರ್‌ಪಿಯಲ್ಲಿ ಸಾಗಾಟ ಮತ್ತು ಕಟಾವು ವೆಚ್ಚ ಸಹ ಸೇರಿದೆ. ಸಕ್ಕರೆಯ ಎಂಎಸ್ಪಿ ಹೆಚ್ಚಳ ಮಾಡುವಂತೆ ಈ ಹಿಂದೆಯೇ ಕೇಂದ್ರ ಸರ್ಕಾರಕ್ಕೆ ನಾವು ಮನವಿ ಸಲ್ಲಿಸಿದ್ದೇವೆ. ಆದರೆ ಕೇಂದ್ರ ಸರ್ಕಾರ ಇದುವರೆಗೆ ಎಂಎಸ್ಪಿ ಹೆಚ್ಚಳ ಮಾಡಿಲ್ಲ ಎಂದು ಸಿಎಂ ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಕಬ್ಬಿಗೆ ನಿಗದಿಪಡಿಸಿರುವ ಎಫ್‌ಆರ್‌ಪಿ ವೈಜ್ಞಾನಿಕವಾಗಿಲ್ಲ. ಸಕ್ಕರೆ ಕಾರ್ಖಾನೆಗಳು ಇಳುವರಿ ರಿಕವರಿ ಕಡಿಮೆ ತೋರಿಸುತ್ತಿವೆ. ಇದನ್ನು ತಪ್ಪಿಸಲು ಪ್ರತಿ ಕಾರ್ಖಾನೆ ಎದುರು ಸರ್ಕಾರದ ವತಿಯಿಂದ ಪ್ರಯೋಗಾಲಯ ತೆರೆಯಬೇಕು. ಕೆಲವು ಕಾರ್ಖಾನೆಗಳು ಹಳೆಯ ಬಾಕಿಯನ್ನು ಉಳಿಸಿಕೊಂಡಿದ್ದು, ಇದರ ಪಾವತಿಗೆ ಕ್ರಮ ಕೈಗೊಳ್ಳಬೇಕು ಎಂದು ರೈತ ಮುಖಂಡರು ಮನವಿ ಮಾಡಿದ್ದಾರೆ.

ತೂಕದಲ್ಲಿ ಮೋಸ, ರಿಕವರಿ ಕಡಿಮೆ ತೋರಿಸುವುದು ಸೇರಿದಂತೆ ಸಕ್ಕರೆ ಕಾರ್ಖಾನೆಗಳ ಕುರಿತು ಕಬ್ಬು ಬೆಳೆಗಾರರಿಗೆ ಇರುವ ಎಲ್ಲಾ ಅಹವಾಲುಗಳನ್ನು ಬಗೆಹರಿಸಲಾಗುವುದು ಎಂದು ರೈತ ಮುಖಂಡರಿಗೆ ಸರ್ಕಾರದ ಸಚಿವರು ತಿಳಿಸಿದ್ದಾರೆ.

ಕಬ್ಬಿನ 11.25 ರಿಕವರಿ ಇದ್ದರೆ ಪ್ರತಿ ಟನ್‌ಗೆ ರೂ.3250 ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕು. ಇದಕ್ಕೆ ಸರ್ಕಾರ ರೂ.50 ಹೆಚ್ಚುವರಿಯಾಗಿ ಪಾವತಿಸಲು ನಿರ್ಧಾರ ಕೈಗೊಳ್ಳಲಾಗಿದೆ. ಇದು ಇಡೀ ರಾಜ್ಯಕ್ಕೆ ಅನ್ವಯವಾಗಲಿದೆ ಎಂದು ಸಿಎಂ ತಿಳಿಸಿದರು. ಸಕ್ಕರೆ ಕಾರ್ಖಾನೆಗಳು ಮಾರಾಟ ಮಾಡುವ ವಿದ್ಯುತ್ ಮೇಲೆ ಪ್ರತಿ ಯುನಿಟ್ಗೆ 60 ಪೈಸೆ ತೆರಿಗೆ ನಿಗದಿಪಡಿಸುವ ಪ್ರಸ್ತಾವನೆಯನ್ನು ಮರು ಪರಿಶೀಲಿಸಬೇಕು ಎಂದು ಕಾರ್ಖಾನೆ ಮಾಲೀಕರು ಮನವಿ ಮಾಡಿದ್ದು, ಇದರ ಮರು ಪರಿಶೀಲನೆ ನಡೆಸಲಾಗುವುದು. ಸಕ್ಕರೆ ಕಾರ್ಖಾನೆಗಳು ಎದುರಿಸುತ್ತಿರುವ ಸಮಸ್ಯೆಗಳು ಅದೇ ರೀತಿ ಕಬ್ಬು ಬೆಳೆಗಾರರು ಸಕ್ಕರೆ ಕಾರ್ಖಾನೆಗಳಿಂದ ಎದುರಿಸುತ್ತಿರುವ ಸಮಸ್ಯೆ ಕುರಿತು ಸಮಾಲೋಚನೆ ನಡೆಸಿ ಪರಿಹಾರ ಒದಗಿಸಲು ಪ್ರತ್ಯೇಕ ಸಭೆ ನಡೆಸಲಾಗುವುದು ಎಂದು ಸಿಎಂ ಭರವಸೆ ನೀಡಿದರು.

# ಗ್ಯಾಸ್ಟ್ರಿಕ್ ಹೊಟ್ಟೆಯುಬ್ಬರ ಎಂದು ನೆಗ್ಲೆಕ್ಟ್ ಮಾಡಬೇಡಿ, ಅದು ಕರುಳಿನ ಕ್ಯಾನ್ಸರ್ ಇರಬಹುದು!

ಸಣ್ಣ ವಯಸ್ಸಿನಲ್ಲಿಯೇ ಕೊಲೊನ್ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿವೆ, ಇದು ಕಳವಳಕಾರಿಯಾಗಿದೆ. ಈ ರೋಗವು ಇನ್ನು ಮುಂದೆ ವಯಸ್ಸಾದವರಿಗೆ ಮಾತ್ರ ಸೀಮಿತವಾಗಿಲ್ಲ; ಇದು ಯುವಜನರ ಮೇಲೂ ಪರಿಣಾಮ ಬೀರುತ್ತಿದೆ. ರೋಗಲಕ್ಷಣಗಳನ್ನು ಮೊದಲೇ ಗುರುತಿಸುವುದು, ಸಮತೋಲಿತ ಆಹಾರ ಮತ್ತು ನಿಯಮಿತ ವೈದ್ಯಕೀಯ ತಪಾಸಣೆಗಳು ತಡೆಗಟ್ಟುವಿಕೆಗೆ ಅತ್ಯಗತ್ಯ.

ಇಂದಿನ ದಿನಗಳಲ್ಲಿ ಬದಲಾಗುತ್ತಿರುವ ಜೀವನಶೈಲಿ, ಅನಾರೋಗ್ಯಕರ ಆಹಾರ ಪದ್ಧತಿ ಮತ್ತು ಹೆಚ್ಚುತ್ತಿರುವ ಒತ್ತಡದಿಂದಾಗಿ, ಸಣ್ಣ ವಯಸ್ಸಿನಲ್ಲಿಯೇ, ಅನೇಕ ರೀತಿಯ ದೀರ್ಘ ಕಾಲದ ಹಾಗೂ ಗಂಭೀರ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ಇದಕ್ಕೆ ಕ್ಯಾನ್ಸರ್ ಕಾಯಿಲೆ ಕೂಡ ಹೊರತಲ್ಲ! ಹೀಗಾಗಿ ಈ ಬಗ್ಗೆ ಜಾಗೃತಿ ಮೂಡಿಸಲು, ಪ್ರತಿ ವರ್ಷ ನವೆಂಬರ್ 7 ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನವನ್ನು ಆಚರಿಸಲಾಗುತ್ತದೆ.


ಕ್ಯಾನ್ಸರ್ ಕಾಯಿಲೆಯಲ್ಲೂ ಕೂಡ ಹಲವಾರು ವಿಧಗಳಿವೆ, ಅವುಗಳಲ್ಲಿ ಒಂದು ಕೊಲೊನ್ ಕ್ಯಾನ್ಸರ್ ಅಂದರೆ ಕರುಳಿನ ಕ್ಯಾನ್ಸರ್ ಕೂಡ ಒಂದು ಹಿಂದೆ, ಈ ರೋಗವು ಹೆಚ್ಚಾಗಿ 50 ವರ್ಷಕ್ಕಿಂತ ಮೇಲ್ಪಟ್ಟ ಜನರಲ್ಲಿ ಕಾಣಿಸಿಕೊಳ್ಳುತ್ತಿತ್ತು, ಆದರೆ ಈಗ 20 ರಿಂದ 40 ವರ್ಷ ವಯಸ್ಸಿನ ಯುವಜನರಲ್ಲಿ ಪ್ರಕರಣಗಳು ವೇಗವಾಗಿ ಹೆಚ್ಚುತ್ತಿವೆ.

ಹೀಗಾಗಿ ಈ ಕಾಯಿಲೆಯ ಆರಂಭಿಕ ರೋಗಲಕ್ಷಣಗಳನ್ನು ಗುರುತಿಸುವುದು ಮತ್ತು ತಕ್ಷಣ ಪರೀಕ್ಷೆಗೆ ಒಳಗಾಗುವುದು ಬಹಳ ಮುಖ್ಯ. ಯಾಕೆಂದ್ರೆ ಇದರ ರೋಗಲಕ್ಷಣಗಳನ್ನು ನಿರ್ಲಕ್ಷ್ಯ ಮಾಡಿ ಚಿಕಿತ್ಸೆ ವಿಳಂಬ ಮಾಡಿದಷ್ಟು ಜೀವಕ್ಕೆ ಆಪತ್ತು ಹೆಚ್ಚು!

ಹೀಗೆ ಹೊಟ್ಟೆಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳು ಪದೇ ಪದೇ ಕಾಣಿಸಿಕೊಳ್ಳುವುದು ಕೂಡ ಈ ಕಾಯಿಲೆಯ ಪ್ರಮುಖ ಲಕ್ಷಣಗಳಲ್ಲಿ ಒಂದು. ಹೀಗಾಗಿ ಇವುಗಳನ್ನೆಲ್ಲಾ ಸಾಮಾನ್ಯ ಸಮಸ್ಯೆಯಂತೆ ಕಾಣಿಸದಂತೆ ಬೇಗನೇ ವೈದ್ಯರ ಬಳಿ ಪರೀಕ್ಷೆ ಮಾಡಿಸಿಕೊಂಡರೆ ಬಹಳ ಒಳ್ಳೆಯದು.

ಸಾಮಾನ್ಯ ಕರುಳಿನ ಅಭ್ಯಾಸದಲ್ಲಿನ ಬದಲಾವಣೆಯು ಕೊಲೊನ್ ಕ್ಯಾನ್ಸರ್‌ನ ಸಂಕೇತವಾಗಬಹುದು. ಹಲವಾರು ವಾರಗಳವರೆಗೆ ಇರುವ ಅತಿಸಾರ ಅಥವಾ ಮಲಬದ್ಧತೆ ಎಚ್ಚರಿಕೆಯ ಸಂಕೇತವಾಗಬಹುದು.

ಅನೇಕ ಜನರು ಇದನ್ನು ಆಹಾರದಲ್ಲಿನ ಬದಲಾವಣೆ, ಒತ್ತಡ ಅಥವಾ



ಔಷಧಿಗಳ ಪರಿಣಾಮ ಎಂದು ತಳ್ಳಿಹಾಕುತ್ತಾರೆ, ಆದರೆ ಇದು ಗಂಭೀರ ಸಂಕೇತವಾಗಿರ ಬಹುದು.

ಶೌಚಾಲಯಕ್ಕೆ ಹೋಗಲು ಆಗಾಗ್ಗೆ ಪ್ರಚೋದನೆಗಳು ಅಥವಾ ಕರುಳಿನ ಚಲನೆಯ ನಂತರವೂ ನಿಮ್ಮ ಕರುಳು ಸಂಪೂರ್ಣವಾಗಿ ಖಾಲಿಯಾಗದ ಭಾವನೆ ಕೊಲೊನ್ ಕ್ಯಾನ್ಸರ್‌ನ ಗಂಭೀರ ಚಿಹ್ನೆಗಳಾಗಿರಬಹುದು.

ಗೆಡ್ಡೆಗಳು ಅತಿಸಾರ ಮತ್ತು ಮಲಬದ್ಧತೆಯ ಪರ್ಯಾಯ ಅವಧಿಗಳಿಗೆ ಕಾರಣವಾಗಬಹುದು ಅಥವಾ ಕರುಳು ಸಂಪೂರ್ಣವಾಗಿ ಖಾಲಿಯಾಗಿಲ್ಲ ಎಂದು ಅನಿಸಬಹುದು.

ಮಲದಲ್ಲಿ ರಕ್ತ ಕಾಣುವುದು ಎಂದಿಗೂ ಒಳ್ಳೆಯ ಸೂಚನೆಯಲ್ಲ. ಮಲದಲ್ಲಿ ಕೆಂಪು ಅಥವಾ ಗಾಢವಾದ ರಕ್ತವನ್ನು ಹೆಚ್ಚಾಗಿ ಮೂಲವ್ಯಾಧಿ ಅಥವಾ ಸಣ್ಣ ಹರಿದುಹೋಗುವಿಕೆ ಎಂದು ತಪ್ಪಾಗಿ ಗ್ರಹಿಸಲಾಗುತ್ತದೆ.

ಇವು ಸಾಮಾನ್ಯ ಕಾರಣಗಳಾಗಿದ್ದರೂ, ಆಗಾಗ್ಗೆ ಸಂಭವಿಸುವ ಅಥವಾ ನೋವು ಅಥವಾ ಕರುಳಿನ ಅಭ್ಯಾಸದಲ್ಲಿನ ಬದಲಾವಣೆಯೊಂದಿಗೆ ಗುದನಾಳದ ರಕ್ತಸ್ರಾವವು ಕರುಳಿನ ಕ್ಯಾನ್ಸರ್‌ನ ಸಂಕೇತವಾಗಿರಬಹುದು.?

ಇದು ಸ್ವಲ್ಪ ಆಶ್ಚರ್ಯಕರವೆನಿಸಬಹುದು. ಇತ್ತೀಚಿನ ದಿನಗಳಲ್ಲಿ ಆಯಾಸ ಸಾಮಾನ್ಯವೆಂದು ಪರಿಗಣಿಸಲಾಗುತ್ತದೆ. ಇದು ಹೆಚ್ಚಾಗಿ ಒತ್ತಡ, ನಿದ್ರೆಯ ಕೊರತೆ ಅಥವಾ ಅತಿಯಾದ ಕೆಲಸದ ಪರಿಣಾಮವಾಗಿದೆ.

ಆದಾಗ್ಯೂ, ವಿಶ್ರಾಂತಿಯ ನಂತರವೂ ನಿರಂತರ ಆಯಾಸ ಮತ್ತು ದೌರ್ಬಲ್ಯ ಮುಂದುವರಿದರೆ, ಅದು ಕರುಳಿನ ಕ್ಯಾನ್ಸರ್‌ನ ಸಂಕೇತವಾಗಿರ ಬಹುದು. ಈ ರೋಗವು ಆಂತರಿಕ ರಕ್ತಸ್ರಾವಕ್ಕೆ ಕಾರಣವಾಗಬಹುದು, ಇದು ರಕ್ತಹೀನತೆ ಮತ್ತು ನಿರಂತರ ಆಯಾಸದ ಭಾವನೆಗೆ ಕಾರಣವಾಗಬಹುದು.

ಹೊಟ್ಟೆ ಅಥವಾ ಗುದನಾಳದಲ್ಲಿ ಗಡ್ಡೆ ಇರುವುದು ಕೊಲೊನ್ ಕ್ಯಾನ್ಸರ್‌ನ ಲಕ್ಷಣವಾಗಿರಬಹುದು. ಈ ಗಡ್ಡೆಯನ್ನು ಹೆಚ್ಚಾಗಿ ಊತ ಎಂದು ಕಡೆಗಣಿಸಲಾಗುತ್ತದೆ, ಆದರೆ ಇದು ದೊಡ್ಡ ಕರುಳು ಅಥವಾ ಗುದನಾಳ ದಲ್ಲಿನ ಕ್ಯಾನ್ಸರ್‌ನಿಂದ ಉಂಟಾಗುವ ಗೆಡ್ಡೆಯಾಗಿರಬಹುದು.

ಈ ಲಕ್ಷಣಗಳು ಮುಂದುವರಿದರೆ, ಅದಕ್ಕೆ ತನಿಖೆ ಅಗತ್ಯ. ಇದರ ಜೊತೆಗೆ, ಹೊಟ್ಟೆ ನೋವು, ಉಬ್ಬಿದ ಭಾವನೆ, ಮಲಬದ್ಧತೆ ಮತ್ತು ಅನಿಲವನ್ನು ಹೊರಹಾಕಲು ಅಸಮರ್ಥತೆ ಮತ್ತು ವಾಂತಿ ಕೂಡ ಕೊಲೊನ್ ಕ್ಯಾನ್ಸರ್‌ನ ಲಕ್ಷಣಗಳಾಗಿವೆ.

ಕೊಲೊನ್ ಅಥವಾ ಕರುಳಿನ ಕ್ಯಾನ್ಸರ್ ತಡೆಗಟ್ಟಲು, ಜೀವನಶೈಲಿ ಮತ್ತು ಆಹಾರಕ್ರಮದ ಬಗ್ಗೆ ಗಮನ ಹರಿಸುವುದು ಬಹಳ ಮುಖ್ಯ. ಈ ಕೆಳಗಿನ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಸಹ ಮುಖ್ಯವಾಗಿದೆ.

ನಾರಿನಂಶ ಹೆಚ್ಚಿರುವ ಆಹಾರ: ದೈನಂದಿನ ಆಹಾರದಲ್ಲಿ ಧಾನ್ಯಗಳು, ಹಸಿರು ತರಕಾರಿಗಳು ಮತ್ತು ಹಣ್ಣುಗಳನ್ನು ಸೇರಿಸಿ.

ಕೆಂಪು ಮಾಂಸ ಮತ್ತು ಸಂಸ್ಕರಿಸಿದ ಆಹಾರಗಳಿಂದ ದೂರವಿರಿ – ಇವುಗಳ ಅತಿಯಾದ ಸೇವನೆಯು ಕೊಲೊನ್ ಕ್ಯಾನ್ಸರ್ ಅಪಾಯವನ್ನು ಹೆಚ್ಚಿಸುತ್ತದೆ.

ಸಾಕಷ್ಟು ನೀರು ಕುಡಿಯಿರಿ – ದೇಹವನ್ನು ಹೈಡ್ರೀಕರಿಸುವುದು ಜೀರ್ಣಾಂಗ ವ್ಯವಸ್ಥೆಯನ್ನು ಆರೋಗ್ಯಕರವಾಗಿರಿಸುತ್ತದೆ.

ನಿಯಮಿತ ವ್ಯಾಯಾಮ – ಪ್ರತಿದಿನ ಕನಿಷ್ಠ 30 ನಿಮಿಷಗಳ ಕಾಲ ಯೋಗ, ನಡಿಗೆ ಅಥವಾ ಯಾವುದೇ ದೈಹಿಕ ಚಟುವಟಿಕೆಯನ್ನು ಮಾಡಿ.

ಧೂಮಪಾನ ಮತ್ತು ಮದ್ಯಪಾನವನ್ನು ತಪ್ಪಿಸಿ – ಈ ಅಭ್ಯಾಸಗಳು ಕ್ಯಾನ್ಸರ್ ಅಪಾಯವನ್ನು ಹಲವು ಬಾರಿ ಹೆಚ್ಚಿಸುತ್ತವೆ.

ನಿಯಮಿತ ಆರೋಗ್ಯ ತಪಾಸಣೆ – ವಿಶೇಷವಾಗಿ ಕುಟುಂಬದಲ್ಲಿ ಕ್ಯಾನ್ಸರ್ ಇತಿಹಾಸವಿದ್ದರೆ, ಕಾಲಕಾಲಕ್ಕೆ ಕೊಲೊನೋಸ್ಕೋಪಿ ಮತ್ತು ಇತರ ಪರೀಕ್ಷೆಗಳನ್ನು ಮಾಡಿಸಿಕೊಳ್ಳಲು ಮರೆಯಬೇಡಿ.

ಒತ್ತಡವನ್ನು ಕಡಿಮೆ ಮಾಡಿ – ಧ್ಯಾನ, ಪ್ರಾಣಾಯಾಮ ಮತ್ತು ಸಾಕಷ್ಟು ನಿದ್ರೆ ಉತ್ತಮ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುತ್ತದೆ ಮತ್ತು ರೋಗಗಳ ಅಪಾಯವನ್ನು ಕಡಿಮೆ ಮಾಡುತ್ತದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248